RW-1

ದಿ.16-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಚವನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಎದುರುದಾರರ ಪರ ಶ್ರೀ.ಡಿ.ಎನ್. ಎಸ್ ವಕೀಲರಿಂದ.

ಈ ಪ್ರಕರಣದಲ್ಲಿ ನಾನು ಎದುರುದಾರನಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ಧು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಸಿ, ಓದಿ, ತಿಳಿದುಕೊಂಡು ಅದಕ್ಕೆ ಸಹಿ ಮಾಡಿದೇನೆ.

ದಿ.19-04-2024 ರಂದು 400 ಕೆವಿ ಗುತ್ತುರು-ಬೀರನಹಳ್ಳಿ ಲೈನ ಬಗ್ಗೆ ಎದುರುದಾರು ಕಳುಹಿಸಿದ ಪತ್ರವನ್ನು ನಿ.ಆರ್-1 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀಮತಿ ಎಸ್ ಸಿ. ವಕೀಲರಿಂದ

2022 ರಿಂದ ನಾನು ಎದುರುದಾರರ ಕಛೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಲೈನ್ ಎಳೆಯುವ ಪೂರ್ವದಲ್ಲಿ ಆ ಜಮೀನಿನ ಮಾಲೀಕರಿಗೆ ನೋಟೀಸು ಕಳುಹಿಸಿದ್ದೇವೆ. ಸದರಿ ನೋಟೀಸನ್ನು ಈಗ ಹಾಜರುಪಡಿಸಲು ದಾಖಲಾತಿ ಲಭ್ಯವಿರುವುದಿಲ್ಲ. ಲೈನ್ ಎಳೆಯುವ ಸಮಯದಲ್ಲಿ ಅರ್ಜಿದಾರರಿಗೆ ಯಾವುದೇ ಪರಿಹಾರ ಕೊಟ್ಟಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬೆಳೆ ನಷ್ಟ ಪರಿಹಾರ ಕೊಟ್ಟಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಹಣವನ್ನು ಚೆಕ್ಕಿನ ಮೂಲಕ ನೀಡಿದ್ದೇವೆ. ಸದರಿ ಚೆಕ್ಕನ್ನು ಹಾಜರುಪಡಿಸಲು ಈಗ ದಾಖಲೆ ಲಭ್ಯವಿರುವುದಿಲ್ಲ. ಲೈನ್ ಎಳೆದಿರುವುದರಿಂದ ಭೂಮಿಯ ಮೌಲ್ಯ ಕಡಿಮೆಯಾಗುತ್ತದೆ ಎನ್ನುವುದು ಸುಳ್ಳು. ಲೈನ್ ಕೆಳಗೆ ವಾಣಿಜ್ಯ ಬೆಳೆ ಬೆಳೆಯಲು ಆಗುವುದಿಲ್ಲ ಎನ್ನುವುದು ನಿಜ. ಲೈನ್ ಅಕ್ಕಪಕ್ಕ ಕೆಲವು ಮೀಟರ್ ನಂತರ ಬೆಳೆ ಬೆಳೆಯುವ ಸಾಧ್ಯತೆ ಇದೆ. 400 ಕೆ ವಿ ಹೈ ಟೆನಶನ್ ವೈರ್ ಆಗಿರುವುದರಿಂದ ಅದರ ಓಲ್ಟೇಜ್ ಬಹಳ ಇರುತ್ತದೆ ಎನ್ನುವುದು ನಿಜ. ಆದರೆ ಲೈನ್ ಎತ್ತರದಲ್ಲಿರುವುದರಿಂದ ಯಾವುದೇ ತೊಂದರೆ ಇರುವುದಿಲ್ಲ. ಮಳೆಗಾಲದಲ್ಲಿ ಲೈನ್ ಕೆಳಗಡೆ ರೈತರು ಓಡಾಡಿದರಿ ಶಾಕ್ ಹೊಡೆಯುತ್ತದೆ ಎನ್ನುವುದು ಸುಳ್ಳು. ನಮ್ಮದು ಸರ್ಕಾರಿ ಇಲಾಖೆ ಆಗಿರುವುದರಿಂದ ಹಳೆಯ ದಾಖಲೆಗಳು ಈಗಲು ಲಭ್ಯವಿರುತ್ತವೆ ಎನ್ನುವುದು ಸರಿಯಲ್ಲ. 1995 ಲೈನ್ ಎಳೆದು ಆದ ನಂತರ ಅರ್ಜಿದಾರರು ಹೆಚ್ಚಿಗೆ ಪರಿಹಾರ ಕೇಳಲು ಬಂದಾಗ ನಾವು ಕೊಡುತ್ತೇವೆ ಅಂತಾ ಹೇಳಿ ಕಳುಹಿಸಿರುತ್ತೇವೆ ಎನ್ನುವುದು ಸುಳ್ಳು. ರೈತರು ಕೇಳಿದರೂ ಸಹಿತ ಅದನ್ನು ಒಪ್ಪಿಕೊಂಡರೆ ಹೆಚ್ಚು ಪರಿಹಾರ

ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಹೆಚ್ಚು ಪರಿಹಾರ ಕೊಡಿ ಎಂದು ಕೇಳಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.